# ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ

ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ, ಭಾರತ ಸರ್ಕಾರ ಮತ್ತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದ ಕಂಪನಿ)

# 1ನೇ ವಾರ್ಷಿಕ ವರದಿ

## 2015 - 16

ನೋಂದಾಯಿತ ಕಛೇರಿ :
ಬೀಜರಾಜ ಸೀಡ್ಸ್ ಕಾಂಪ್ಲೆಕ್ಸ್, 2ನೇ ಮಹಡಿ, ಸೌಥ್ ಬ್ಲಾಕ್,
ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು– 560024

# ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ
# ನಿಯಮಿತದ ನಿರ್ದೇಶಕ ಮಂಡಳಿ

| ಕ್ರ. ಸಂ. | ನಿರ್ದೇಶಕರ ಹೆಸರುಗಳು | |
|---|---|---|
| 1. | **ಶ್ರೀ ಜಿ.ವಿ.ಬಲರಾಮ್,**<br>ಅಧ್ಯಕ್ಷರು, ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು–560 001. | ಅಧ್ಯಕ್ಷರು |
| 2. | **ಶ್ರೀ ಚಿನ್ನಯ್ಯ ಕಣ್ಣನ್,**<br>ನಿರ್ದೇಶಕರು (ಹಣಕಾಸು), ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ,<br>ನಂ. ಡಿ–3, 1ನೇ ಮಹಡಿ, ಎ–ವಿಂಗ್, ಜಿಲ್ಲಾ ಕೇಂದ್ರ, ಸಾಕೆತ್, ನವದೆಹಲಿ–110 017. | ನಿರ್ದೇಶಕರು |
| 3. | **ಶ್ರೀ ರಮೇಶ್ ಕುಮಾರ್ ಕುರುಪ್ಪತ್,**<br>ಪ್ರಧಾನ ವ್ಯವಸ್ಥಾಪಕರು, ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ,<br>ನಂ. ಡಿ–3, 1ನೇ ಮಹಡಿ, ಎ–ವಿಂಗ್, ಜಿಲ್ಲಾ ಕೇಂದ್ರ, ಸಾಕೆತ್, ನವದೆಹಲಿ–110 017 | ನಿರ್ದೇಶಕರು |
| 4. | **ಶ್ರೀ ಎನ್.ಸುರೇಶ್,**<br>ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ.<br>ನಂ. 39, "ಶಾಂತಿ ಗೃಹ"ಭಾರತ್ ಸ್ಕೌಟ್ಸ್ & ಗೈಡ್ಸ್ ಕಟ್ಟಡ,<br>ಅರಮನೆ ರಸ್ತೆ, ಬೆಂಗಳೂರು–560 001. | ನಿರ್ದೇಶಕರು |

## ಸೂಚನಾ ಪತ್ರ

**ಎಲ್ಲ ಪಾಲುದಾರರಿಗೆ,**

ಈ ಕೆಳಗಿನ ವ್ಯವಹಾರಗಳನ್ನು ನಡೆಸುವ ಸಲುವಾಗಿ ಕಂಪನಿಯು 1ನೇ ವಾರ್ಷಿಕ ಸರ್ವಸದಸ್ಯರ ಸಭೆಯು ಬುಧವಾರ ದಿನಾಂಕ: 21ನೇ ಸೆಪ್ಟೆಂಬರ್, 2016ರಂದು ಅಪರಾಹ್ನ 1-00 ಗಂಟೆಗೆ ಕಂಪನಿಯ ನೋಂದಾಯಿತ ಕಛೇರಿ, ಬೀಜರಾಜ ಸೀಡ್ಸ್ ಕಾಂಪ್ಲೆಕ್ಸ್, 2ನೇ ಮಹಡಿ, ಸೌಥ್ ಬ್ಲಾಕ್, ಹೆಬ್ಬಾಳ, ಬೆಂಗಳೂರು–560 024 ಇಲ್ಲಿ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

**ಸಾಮಾನ್ಯ ವ್ಯವಹಾರ:**

01. 2013ನೇ ಸಾಲಿನ ಕಂಪನಿಗಳ ಅಧಿನಿಯಯದ ಪ್ರಕರಣ 143(6)(ಬಿ) ಅಡಿಯಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಾಪರೀಕ್ಷಕರಿಂದ ಸ್ವೀಕರಿಸಲಾದ ಟಿಪ್ಪಣಿಗಳೊಂದಿಗೆ 31ನೇ ಮಾರ್ಚ್, 2016ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಲೆಕ್ಕಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರು ಮತ್ತು ನಿರ್ದೇಶಕರ ವರದಿಗಳನ್ನು ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.
02. 2016-17ನೇ ಆರ್ಥಿಕ ವರ್ಷಕ್ಕೆ ಭಾರತದ ನಿಯಂತ್ರಕ ಮತ್ತು ಮಹಾಲೇಖಾಪರೀಕ್ಷಕರು, ನವದೆಹಲಿ ಇವರಿಂದ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಕಗೊಂಡ ಮೆ॥ ಸಾಂಬಸಿವರಾವ್ ಮತ್ತು ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರ ಗೌರವಧನವನ್ನು ನಿಗದಿಪಡಿಸಲು ನಿರ್ದೇಶಕ ಮಂಡಳಿಗೆ ಅಧಿಕಾರ ನೀಡುವುದು.

ಮಂಡಳಿಯ ಆದೇಶಾನುಸಾರ

ಸಹಿ/–

**(ಸಿ.ಎಸ್.ಶಶಿಧರ ಜಿ.ಎಸ್.)**

ವೃತ್ತಿನಿರತ ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು

ದಿನಾಂಕ : 14.09.2016

**ಟಿಪ್ಪಣಿ :**

a) ಸಭೆಗೆ ಹಾಜರಾಗಿ ಮತ ಚಲಾಯಿಸಲು ಹಕ್ಕುಳ್ಳವರಾಗಿರುವ ಸದಸ್ಯರು, ಅವನ/ಅವಳ ಬದಲಾಗಿ ಹಾಜರಾಗಿ ಮತ ಚಲಾಯಿಸಲು ಪ್ರತಿನಿಧಿ (ಪ್ರಾಕ್ಷಿ) ಯನ್ನು ನೇಮಕ ಮಾಡಲು ಹಕ್ಕುಳ್ಳವರಾಗಿದ್ದು ಮತ್ತು ಪ್ರತಿನಿಧಿ (ಪ್ರಾಕ್ಸಿ)ಯು ಕಂಪೆನಿಯ ಸದಸ್ಯರಾಗಿರಲೇಬೇಕೆಂದೇನಿಲ್ಲ.

b) ನಿಗಮವು ಒಂದು ಸರ್ಕಾರಿ ನಿಗಮವಾಗಿರುವುದರಿಂದ, 2013ನೇ ಸಾಲಿನ ಕಂಪನಿಗಳ ಅಧಿನಿಯಮದ ಪ್ರಕರಣ 139(2)ರ ಉಪ ಪ್ರಕರಣ (5)ರ ಉಪಬಂಧದ ಪ್ರಕಾರ ಭಾರತದ ನಿಯಂತ್ರಕರು ಮತ್ತು ಲೆಕ್ಕಪರಿಶೋಧಕರು, ನವದೆಹಲಿ ಇವರು ದಿನಾಂಕ: 09.08.2016ರ ಪತ್ರದಲ್ಲಿ ಮೆ॥ ಎಂ.ಸಾಂಬಸಿವರಾವ್ ಮತ್ತು ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು 2016-17ನೇ ಹಣಕಾಸು ವರ್ಷಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕಗೊಳಿಸಿರುತ್ತಾರೆ.